# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 160/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಕಮಲೇಶ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಗಣೇಶ್ | | 09.01.2023 |
| ವಯಸ್ಸು | ಃ 26 ವರ್ಷ | | |
| ವೃತ್ತಿ | ಃ ಖಾಸಗಿ ಕಂಪನಿ ಕೆಲಸ | ಪ್ರಾ.ಸಾ. | ಃ 04 |
| ವಾಸಸ್ಥಳ | ಃ ತಲಕಾಡು, ಮೈಸೂರು | ಚಾ.ಸಾ. | ಃ 06 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ದಿಃ*13.01.2022* ರಂದು ಮೃತ ಪ್ರಜ್ವಲ್ ನ ತಾಯಿ ಮಮತ ನನಗೆ ಪೋನ್ ಮಾಡಿ ಪ್ರಜ್ವಲ್ ನು ಕಟ್ಟಡದ ಮೇಲಿನಿಂದ ಬಿದ್ದಿದ್ದ ಬಗ್ಗೆ ಹೇಳಿ ನನಗೆ ಬರುವಂತೆ ಹೇಳಿದ್ದರು. ಆ ಕಾಲಕ್ಕೆ ನಾನು ಮ.*12.30* ರ ವೇಳೆಯಲ್ಲಿ ಅದ್ವೈತ ರೆಸಿಡೆನ್ಸಿ ಹೋಟೆಲ್ ನ ಬಳಿ ಹೋಗಿದ್ದೆ. ನಾನು ಹೋಗುವಷ್ಟರಲ್ಲಿ ಪ್ರಜ್ವಲ್ ನನ್ನು ಆಸ್ಪತ್ರೆಗೆ ಸೇರಿಸಿದ್ದರು ಮತ್ತು ಪ್ರಜ್ವಲ್ ಆಸ್ಪತ್ರೆಯಲ್ಲಿ ಮರಣಹೊಂದಿದ್ದರು. ಆ ದಿನ ರಾತ್ರಿ *9.30* ಕ್ಕೆ ಪ್ರಜ್ವಲ್ ನ ತಾಯಿ ಮಮತ ಇವರು ಪೋಲೀಸರಿಗೆ ಮತ್ತು ನಮಗೆ ಪ್ರಜ್ವಲ್ ನು ಕಟ್ಟಡದ ಮೇಲಿನಿಂದ ಬಿದಿದ್ದ ಸ್ಥಳವನ್ನು ತೋರಿಸಿದ್ದರು. ಆ ಸ್ಥಳ ಅದ್ವೈತ ರೆಸಿಡೆನ್ಸಿ ಯ ಪಕ್ಕದಲ್ಲಿ ರಾಜ್ ಕಮಲ್ ಟಾಕೀಸ್ ಕಡೆಗೆ ಹೊಗುವ ರಸ್ತೆಯಲ್ಲಿ ಇತ್ತು. ಆ ಸ್ಥಳದಲ್ಲಿ ರಕ್ತ ಹತ್ತಿತ್ತು. ಆ ಕಾಲಕ್ಕೆ ಆ ಸ್ಥಳವನ್ನು ನೋಡಿಕೊಂಡು ಬರವಣಿಗೆ ಮಾಡಿಕೊಂಡಿದ್ದರು. ಆ ಬರವಣಿಗೆ ಮಾಡಿದ್ದ ಕಾಲಕ್ಕೆ ರಸ್ತೆಗೆ ಹತ್ತಿದ್ದ ರಕ್ತ ಒಣಗಿತ್ತು. ಆ ರಸ್ತೆಯಲ್ಲಿ ಜಾಸ್ತಿ ಜನ ಓಡಾಡುತ್ತಾರೆ. ಅದೇ ಕಾಲಕ್ಕೆ ಪ್ರಜ್ವಲ್ ನ ತಾಯಿ ಅದ್ವೈತ ರೆಸಿಡೆನ್ಸಿ ಕಟ್ಟಡ ಮುಂಭಾಗದ ಜಾಗವನ್ನು ತೋರಿಸಿ ಅದೇ ಸ್ಥಳದಲ್ಲಿ ಪ್ರಜ್ವಲ್ ಗೆ ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿದ್ದರು ಎಂದು ಹೇಳಿದ್ದರು. ಆ ದಿನ ರಾತ್ರಿ *9.30* ರಿಂದ *10.30* ರ ವೇಳೆಯಲ್ಲಿ ಆ ಸ್ಥಳದಲ್ಲಿ ಬರವಣಿಗೆ ಮಾಡಿದ್ದರು ಮತ್ತು ನನ್ನ ಸಹಿಯನ್ನು

ಪಡೆದಿದ್ದರು. ಆ ಕಾಲಕ್ಕೆ ಆ ಸ್ಥಳದಲ್ಲಿ ಲೈಟ್ ಬೆಳಕು ಇತ್ತು. ಪ್ರಜ್ವಲ್ ನು ಸೋಮಶೇಖರ ಎನ್ನುವವರ ಹೆಂಡತಿಗೆ ಫೋನ್ ಮಾಡಿ ಮೇಸೆಜ್ ಮಾಡಿದ್ದಕ್ಕೆ ಸೋಮಶೇಖರ್ ಎನ್ನುವವರು ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿದ್ದಕ್ಕೆ ಪ್ರಜ್ವಲ್ ನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಗೊತ್ತಾಗಿತ್ತು. ಈಗ ನಾನು ನೋಡುತ್ತಿರುವ ನಿ.ಪಿ-*9* ನೋಟೀಸ್ ಮತ್ತು ನಿ.ಪಿ-*5* ಮಹಜರ್ ಆ ಸ್ಥಳದಲ್ಲಿ ಬರೆದು ನನ್ನ ಸಹಿ ಪಡೆದಿದ್ದ ದಾಖಲೆಗಳಿವೆ. ಸದರಿ ಸಹಿಗಳನ್ನು ನಿ.ಪಿ-*9(ಬಿ)* ಮತ್ತು ನಿಪಿ-*5* ರಲ್ಲಿನ ಸಹಿಯನ್ನು ನಿ.ಪಿ-*5(ಸಿ)* ಎಂದು ಗುರುತಿಸಿದೆ.

***1* ನೇ ಆರೋಪಿತನ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

ಪಾಟೀ ಸವಾಲು : 2 ನೇ ಆರೋಪಿ ಪರ ವಕೀಲರಾದ ಶ್ರೀ ಡಿ.ಕೆ ರವರಿಂದಃ-

*3.* ಪ್ರಜ್ವಲ್ ಮತ್ತು ಅವರ ತಾಯಿ ನನ್ನ ಸಂಬಂಧಿಗಳು ಎಂದರೆ ನಿಜ. ಮಮತ ಅವರು ಹೇಳಿದ್ದರಿಂದಲೇ ನನಗೆ ಆ ಘಟನೆ ಬಗ್ಗೆ ಗೊತ್ತಾಗಿತ್ತು ಎಂದರೆ ನಿಜ. ನಾನು ಅಲ್ಲಿಗೆ ಹೋಗುವದಕ್ಕಿಂತ ಮುಂಚೆ ಅಲ್ಲಿ ಏನು ನಡೆದಿತ್ತು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ. ಮಮತ ಇವರೇ ಆ ಘಟನೆ ಹೇಗೆ ನಡೆದಿತ್ತು ಎಂದು ಹೇಳಿ ಆ ಸ್ಥಳವನ್ನು ತೋರಿಸಿದ್ದರು ಎಂದರೆ ನಿಜ. ನೋಟೀಸ್ ಮತ್ತು ಮಹಜರ್ ಗೆ ಆ ಘಟನೆ ಸ್ಥಳದಲ್ಲಿಯೇ ನಾನು ಸಹಿ ಮಾಡಿದ್ದೇನೆ. ಮಮತ ಇವರು ನನ್ನ ಸಂಬಂಧಿಯಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*